# ತುಮಕೂರು ವಿಶ್ವವಿದ್ಯಾನಿಲಯ

## ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ

ಡಾ. ಪಿ. ಸದಾನಂದಮಯ್ಯ ಕಟ್ಟಡ, ವಿಶ್ವವಿದ್ಯಾನಿಲಯ ಆವರಣ, ಬಿ.ಎಚ್.ರಸ್ತೆ, ತುಮಕೂರು– 572 103

ಸಂಖ್ಯೆ:ತುವಿ: ಸ್ನಾ.ವ್ಯ.ಆ.ಅ.ವಿ:2024–25/967 ದಿನಾಂಕ:23.09.2024

**ದರಪಟ್ಟಿ ಆಹ್ವಾನ (ವಿ.ವಿ.ವೆಬ್‌ಸೈಟ್)**

**ವಿಷಯ: ಎಂ.ಬಿ.ಎ ವಿಭಾಗದ ವತಿಯಿಂದ ಒಂದು ದಿನದ ಕಾರ್ಯಗಾರ ಸಮಾರಂಭಕ್ಕೆ ಊಟ ಸರಬರಾಜು ಮಾಡಲು ದರಪಟ್ಟಿ ಆಹ್ವಾನಿಸಿರುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಂ.ಬಿ.ಎ ವಿಭಾಗದ ವತಿಯಿಂದ Digitalization and Innovation for Sustainable Eco-System of Business ಎಂಬ ಶೀರ್ಷಿಕೆಯ ಮೇಲೆ (Hybrid Mode) **ದಿನಾಂಕ:19.10.2024ರಂದು** ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದ ಕಾರ್ಯಕ್ರಮಕ್ಕೆ ಮಧ್ಯಾಹ್ನ 01 ಗಂಟೆಗೆ (ಸರ್ ಎಂ. ವಿಶ್ವೇಶ್ವರಯ್ಯ ಆಡಿಟೋರಿಯಂನಲ್ಲಿ) **ಊಟವನ್ನು ಸರಬರಾಜು ಮಾಡಲು** ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ವಿವರ | ಅಂದಾಜು ಪ್ರಮಾಣ | ದರ ರೂ. ಪ್ರತಿ ಒಂದು ಊಟಕ್ಕೆ (ಎಲ್ಲಾ ತೆರಿಗೆ ಸೇರಿದಂತೆ) |
|---|---|---|---|
| 1 | ವೆಜಿಟೇಬಲ್ ಪಲಾವ್ ಮತ್ತು ರೈತ ಮೊಸರನ್ನ, ಉಪ್ಪಿನಕಾಯಿ, ಡ್ರೈ–ಜಾಮೂನು, ಈರುಳ್ಳಿ ಬಜ್ಜಿ, ಬಾಳೆಹಣ್ಣು. | 300 | |

**ಷರತ್ತು ಮತ್ತು ನಿಬಂಧನೆಗಳು:**

1. ಮುಚ್ಚಿದ ಲಕೋಟೆಯ ಮೇಲೆ **"ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಸಮಾರಂಭಕ್ಕೆ ಊಟವನ್ನು ಸರಬರಾಜು ಮಾಡಲು ದರಪಟ್ಟಿ"** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.
2. ದರಪಟ್ಟಿಗಳನ್ನು **ಅಧ್ಯಕ್ಷರು, ಎಂ.ಬಿ.ಎ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು–572 103** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರರಾಗಿರುವುದಿಲ್ಲ.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 07.10.2024 ಪೂರ್ವಾಹ್ನ 11–00.**
4. ದರಪಟ್ಟಿಯನ್ನು **ದಿನಾಂಕ:07.10.2024 ರಂದು ಅಪರಾಹ್ನ 12–00ಕ್ಕೆ ತೆರೆಯಲಾಗುವುದು.**
5. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
6. ಸರಬರಾಜು ಮಾಡಿದ 30 ದಿನಗಳೊಳಗೆ ಹುಂಡಿಯನ್ನು ಪಾವತಿಸಲಾಗುವುದು.
7. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
8. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ. ಮತ್ತು ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
9. ದರಪಟ್ಟಿಯು ರೂ. ಒಂದು ಲಕ್ಷ ಮಿತಿಗೊಳಪಟ್ಟಿರತಕ್ಕದ್ದು.
10. ದರಪಟ್ಟಿಯಲ್ಲಿ ನಮೂದಿಸಿರುವ ಊಟದ ಪ್ರಮಾಣವನ್ನು ಹೆಚ್ಚಿಸುವ, ಕಡಿಮೆಗೊಳಿಸುವ ಅಥವಾ ರದ್ದು ಪಡಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
11. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
12. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಅಧ್ಯಕ್ಷರು, ಎಂ.ಬಿ.ಎ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

ಅಧ್ಯಕ್ಷರು

23/9/24

ಡಾ. ನೂರ್ ಅಫ್ಜಾ
ಅಧ್ಯಕ್ಷರು
ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ.
ತುಮಕೂರು 572103

**ಪ್ರತಿಗಳು:** 1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ಮಾನ್ಯ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ರಕ್ಷಣಾ ಪ್ರತಿ.